ಶ್ರೀ ಎ. ಲಕ್ಷ್ಮೀಸಾಗರ್,—ನೀರಿನ ಕೊರತೆ ಇದೆ. ಆದಷ್ಟು ಬೇಗನೆ ಇದನ್ನು ಮುಗಿಸಲಿಕ್ಕೆ ಎಲ್ಲಾ ಪ್ರಯತ್ನಗಳನ್ನು ನಾವು ಮಾಡುತ್ತೇವೆ.

ಶ್ರೀ ಬಿ ಸ್ವಾಮಿರಾವ್.—ಎಲ್ಲಾ ಪ್ರಶ್ನೆಗಳಿಗೂ ಆದಷ್ಟು ಬೇಗ ಎಂದು ಹೇಳುತ್ತೀರಿ, ಆದರ ಅರ್ಥ ಏನಂ ಎಂದಂ ಹೇಳುತ್ತೀರಾ ?

ಅಧ್ಯಕ್ಷರು.—ಅದಕ್ಕೆ ಒಂದು ಅಷ್ಯೂರೆನ್ಸ್ ಕಮಿಟಿ ಇದೆ, ಅದರಲ್ಲಿ ನೀವು ಸಹ ಮೆಂಬರ್ ಇದ್ದೀರಿ.

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಉಪಯೋಗಿಸುವ ಭಾಷೆಯಲ್ಲಿ ಏನು ಅರ್ಥ ಇದೆಯೋ ಆದೇ ಅರ್ಥವನ್ನು ಕೊಡಂತ್ತದೆ.

ಶ್ರೀ ಯು. ಭೂಪತಿ.—ಸ್ವಾಮಿ, ಬಳ್ಳಾರಿ ಪಟ್ಟಣಕ್ಕೆ ನೀರನ್ನು ಸರಬರಾಜು ಮಾಡಲು ವಿಳಂಬವಾಗಿರುವುದಕ್ಕೆ ಅನೇಕ ಕಾರಣಗಳನ್ನು ಕೊಟ್ಟಿದ್ದೀರಿ. ಗುರುತ್ವಾಕರ್ಷಣೆ ಕೊಳವೆ ಮಾರ್ಗ ಮತ್ತು ಶುದ್ಧೀಕರಣ ಘಟಕಗಳಿಗೆ ಬೇಕಾಗುವ ಭೂಸ್ವಾಧೀನ ಕಾರ್ಯ ತಡವಾಯಿತು. ವಾಯು ಪಡೆಯವರು ಒಡ್ಡಿದ ಸಮಸ್ಯೆಗಳು ಮತ್ತು ಆಡಚಣೆಗಳಿಂದಾಗಿ ತಡವಾಯಿತು, ಎರಡು ರೈಲ್ವೇ ಮಾರ್ಗಗಳನ್ನು ದಾಟಬೇಕಾಗಿರುವುದರಿಂದ ಅವರಿಂದ ಅನುಮತಿ ಪಡೆದುಕೊಳ್ಳಬೇಕಾಗಿದೆ, ತುಂಗಭದ್ರಾ ಕಾಲುವೆಯನ್ನು ಮುಚ್ಚಿದ ಅವಧಿಯಲ್ಲಿ ಬೇಕಾಗುವ ನೀರನ್ನು ಶೇಖರಿಸಿ ಉಪಯೋಗಿಸಲು ಉದ್ದೇಶಿಸಲಾದ ಅಲ್ಲಿಪುರ ಕೆರೆಯ ಸ್ವಾಧೀನವು ಸಣ್ಣ ನೀರಾವರಿ ಇಲಾಖೆಯಿಂದ ಇನ್ನೂ ಮಂಡಲಿಗೆ ದೊರಕಿಲ್ಲದ ಕಾರಣದಿಂದ ತಡವಾಗಿದೆ ಎಂದು ಹೇಳಿದ್ದೀರಿ. ಇದೆಲ್ಲಾ ನಿಮಗೆ ಮೊದಲೇ ಗೊತ್ತಿರಲಿಲ್ಲವೆ? ಆಗ ಈ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಲಂಚಿಪ್ರಯತ್ನ ಮಾಡಿರಲಿಲ್ಲವೆ? ಆ ಪ್ರಯತ್ನಗಳು ಈಗ ಯಾವ ಹಂತದಲ್ಲಿವೆ ಎಂಬುದನ್ನು ಹೇಳುತ್ತೀರಾ?

ಶ್ರೀ, ಎ. ಲಕ್ಷ್ಮೀಸಾಗರ್.—ಯಾವ ಕೆಲಸವೂ ಅಷ್ಟು ಸುಲಭವಾಗಿ ಆಗುವುದಿಲ್ಲ. ನಾವು ಮೊದಲು ಕೆಲಸವನ್ನು ಪ್ರಾರಂಭ ಮಾಡಿ ನಂತರ ಬರತಕ್ಕ ಸಮಸ್ಯೆಗಳ ಬಗ್ಗೆ ಸ್ವಲ್ಪಮಟ್ಟಿನ ಒತ್ತಾಯವನ್ನು ಮಾಡಿದರೆ ಆ ಕೆಲಸ ಆಗುತ್ತದೆ. ಈಗಾಗಲೇ ನಾನು ಹೇಳಿದ ಕೆಲವು ಕಾರಣಗಳಿಂದ ಸ್ವಲ್ಪ ವಂಟ್ಟಿವ ವಿಳಂಬವಾಗಿದೆ. ಆದಷ್ಟುಬೇಗ ಇದನ್ನು ಕಾರ್ಯಗತ ಮಾಡಿಸಿಕೊಡುತ್ತೇನೆ.

ಬೆಂಗಳೂರು ಪ್ರಾಧಿಕಾರ ನಿವೇಶನಗಳನ್ನು ಹಂಚಿರುವ ಬಗ್ಗೆ.

೪೬೮ ಶ್ರೀ ಚಂದ್ರಕಾಂತ ಜಿ. ಬೆಲ್ಲದ್. (ಧಾರವಾಡ).—ಮಾನ್ಯ ಕಾನೂನು ಸಂಸದೀಯ ವ್ಯವಹಾರಗಳು, ಆಹಾರ ಮತ್ತು ನಾಗರೀಕ ಸರಬರಾಜು ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

೧ ೧೯೮೩-೮೪, ೧೯೮೪-೮೫ ಮತ್ತು ೧೯೮೫-೮೬ರಲ್ಲಿ ಹಂಚಿರುವ ನಿವೇಶನಗಳ ಸಂಖ್ಯೆ, ಎಷ್ಟು ?

೨ ನಿವೇಶನಗಳನ್ನು ಹಂಚಲು ಅನುಸರಿಸಲಾಗುತ್ತಿರುವ ವಿಧಾನಗಳೇನು ?

೩ ಈಗ ಅನುಸರಿಸುತ್ತಿರುವ ವಿಧಾನಗಳಿಂದ ಕನ್ನಡಿಗರಿಗೆ ನ್ಯಾಯ ದೊರಕಿದೆಯೇ ?

೪ ೧೯೮೭-೮೮ನೇ ಸಾಲಿನಲ್ಲಿ ಹಂಚಬೇಕಾಗಿರುವ ನಿವೇಶನಗಳು ಕರ್ನಾಟಕ ಜನತೆಗೆ ಸಿಗುವ ಬಗ್ಗೆ ಸರ್ಕಾರದವರು ಯಾವ ರೀತಿಯ ಯೋಜನೆಯನ್ನು ರೂಪಿಸಿದ್ದಾರೆ ?

೫ ಕರ್ನಾಟಕದ ಹೊರಗಿನವರು ಹೆಚ್ಚಿನ ಸಂಖ್ಯೆಯಲ್ಲಿತಪ್ಪು ದಾಖಲೆಗಳನ್ನು ನೀಡಿ ನಿವೇಶನಗಳನು ಪಡೆಯುತ್ತಿರುವುದೂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

೬ ಹಾಗಿದ್ದಲ್ಲಿ ತಪ್ಪಿತಸ್ಥರ ಮೇಲೆ ಸರ್ಕಾರದವರು ಕೈಗೊಂಡಿರುವ ಕ್ರಮವೇನು ? ಮತ್ತು ಕರ್ನಾಟಕದ ಜನತೆಗೆ ನ್ಯಾಯ ದೊರಕಿಸಿಕೊಡಲಾಗುವುದೇ ?

ಶ್ರೀ .ಎ. ಲಕ್ಷ್ಮೀಸಾಗರ್, (ಕಾನೂನು, ಸಂಸದೀಯ ವ್ಯವಹಾರ ಹಾಗೂ ಆಹಾರ ನಾಗರೀಕ ಸರಬರಾಜು ಮತ್ತು ನಗರಾಭಿವೃದ್ಧಿ ಮಂತ್ರಿಗಳು).—

೧ ಒಟ್ಟು ೯,೦೭೩ ನಿವೇಶನಗಳು.

೨ ಸರ್ಕಾರ ಆಗಾಗ್ಗೆ ಹೊರಡಿಸುವ ಹಂಚಿಕೆ ನಿಯಮಾವಳಿಯಂತೆ ಹಂಚಿ ಮಾಡಲಾಗುತ್ತಿದೆ. ಈಗ ೧೯೮೪ನೇ ಸಾಲಿನಲ್ಲಿ ತಯಾರಿಸಿದ ಆದೇಶದನ್ವಯ ಹಂಚಿಕೆ ಮಾಡಲಾಗಿದೆ.

೩ ಕರ್ನಾಟಕ ರಾಜ್ಯದಲ್ಲಿ ಕನಿಷ್ಟ ೧೦ ವರ್ಷಗಳ ಕಾಲ ಯಾರು ವಾಸವಾಗಿರುತ್ತಾರೋ ಅಂತಹವರಿಗೆ ಹಂಚಿಕೆ ಮಾಡಲಾಗುತ್ತಿದೆ.

೪ ಕರ್ನಾಟಕ ರಾಜ್ಯದಲ್ಲಿ ಕನಿಷ್ಟ ೧೦ ವರ್ಷಗಳ ಕಾಲ ವಾಸವಾಗಿರುತ್ತಾರೋ ಅಂತಹವರಿಗೆ ಹಂಚಿಕೆ ಮಾಡಲಾಗುತ್ತಿದೆ.

೫ ಇಲ್ಲ.

೬ ಉದ್ಭವಿಸುವುದಿಲ್ಲ.

ಮಾನ್ಯ ಅಧ್ಯಕ್ಷರೆ,ತಮ್ಮಲ್ಲಿ ಒಂದು ವಿಶೇಷ ಮನವಿ ಎಂದರೇ.....

ಅಧ್ಯಕ್ಷರು.—ನಿಮಗೆ ಸಮಯ ಬೇಕಾಗಿದ್ದರೆ ಕೇಳಿ.

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ, ಮಾನ್ಯ ಸದಸ್ಯರು ಯಾವ ರೀತಿ ಪ್ರಶ್ನೆಯನ್ನು ಕೇಳಿದ್ದಾರೆಂದರೆ,'೧೯೮೫–೮೪ ಮತ್ತು ೮೫–೮೬ರಲ್ಲಿ ಹಂಚಿರುವ ನಿವೇಶನಗಳ ಸಂಖ್ಯೆ ಎಷ್ಟು?' ಎಂದು ಕೇಳಿದ್ದಾರೆ. ಆದರೆ ಯಾವ ಊರಿನಲ್ಲಿ ಎಂಬುದೇ ಇಲ್ಲ.....

ಶ್ರೀ ಚಂದ್ರಕಾಂತ ಜಿ ಬೆಲ್ಲದ್.—ಬೆಂಗಳೂರು ಪ್ರಾಧಿಕಾರಕ್ಕೆ ಸಂಬಂಧಪಟ್ಟಿದ್ದುದು

ಶ್ರೀ ಎ. ಲಕ್ಷ್ಮೀಸಾಗರ್.—ಸ್ವಾಮಿ ಅಧ್ಯಕ್ಷರೆ,ಮಾನ್ಯ ಸದಸ್ಯರು ಯಾವ ಊರಿನ ಪ್ರಶ್ನೆಯನ್ನು ಕೇಳಿದ್ದಾರೆನ್ನುವ ಬಗ್ಗೆ ಬಹಳ ರೀಸರ್ಚ್ ಮಾಡಿ ಅವರ ಮೂಲ ಪ್ರಶ್ನೆ ಏನು ಎಂಬುದನ್ನು ಕಂಡು ಹಿಡಿದು ನೋಡಿದಾಗ ಅದು ಬೆಂಗಳೂರು ಪ್ರಾಧಿಕಾರಕ್ಕೆ ಸಂಬಂಧಪಟ್ಟಿದ್ದುದು ಎಂದು ಗೊತ್ತಾಯಿತು. ಇಲ್ಲದಿದ್ದರೆ ಇವರು ಕೇಳಿರತಕ್ಕ ಪ್ರಶ್ನೆಗೆ ನಾನು ಯಾವ ರೀತಿ ಉತ್ತರವನ್ನು ಕೊಡಬೇಕೆಂಬುದನ್ನು ತಾವೇ ಹೇಳಿ. ಈಗ ಮಾನ್ಯ ಸದಸ್ಯರು ಕೇಳಿರತಕ್ಕ ಪ್ರಶ್ನೆಗೆ ನಾನು ಈ ಉತ್ತರಗಳನ್ನು ಕೊಡಬಯಸುತ್ತೇನೆ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್.—ಮಾನ್ಯ ಅಧ್ಯಕ್ಷರೆ, ನಾನು ಪ್ರಶ್ನೆಯನ್ನು ನೇರವಾಗಿಯೇ ಕೇಳಿದ್ದೇನೆ. ಇದು ಬೆಂಗಳೂರು ಪ್ರಾಧಿಕಾರಕ್ಕೆ ಸಂಬಂಧಪಟ್ಟಂತೆ ಇದೆ. ಈ ಕರ್ನಾಟಕ ರಾಜ್ಯದಲ್ಲಿ ಇರತಕ್ಕ ಜನರು ಯಾರು ೧೦ ವರ್ಷಗಳಿಗಿಂತ ಹೆಚ್ಚು ಕಾಲದಿಂದ ಇಲ್ಲಿಯೇ ವಾಸಿಸುತ್ತಿರುವವರು ಇದ್ದಾರೆ ಅವರಿಗೆ ನಿವೇಶನಗಳನ್ನು ಕೊಡುತ್ತೇವೆಂದು ಹೇಳಿದ್ದಾರೆ. ತಹಸೀಲ್ದಾರ್‌ರವರ ಆಫೀಸಿನಿಂದ ಬೊಟ್ಟಿ ಸರ್ಟಿಫಿಕೇಟ್‌ಗಳನ್ನು ಬಹಳ ಜನ ತಂದುಕೊಟ್ಟು ನಿವೇಶನಗಳನ್ನು ಪಡೆದಿದ್ದಾರೆ, ಮತ್ತು ಪಡೆಯುತ್ತಿದ್ದಾರೆ. ಇದರ ಬಗ್ಗೆ ಸರ್ಕಾರ ಏನು ಕ್ರಮವನ್ನು ಕೈಗೊಂಡಿದೆ? ಇದರ ಜೊತೆಗೆ ಕೆಲವರು ಶಾಸಕರ ಹತ್ತಿರ ಬಂದು ಕೆಲವು ಫಾರಂಗಳಿಗೆ ಸಹಿ ಹಾಕಿಸಿಕೊಂಡು ಶಿಫಾರಸು ಮಂಜೂರಾತರ ನಿವೇಶನಗಳನ್ನು ಪಡೆಯುತ್ತಿದ್ದಾರೆ. ಆದ್ದರಿಂದ ಇನ್ನು ಮುಂದೆ ನಿವೇಶನಗಳನ್ನು ಕೊಡುವಾಗ ೧೦ ವರ್ಷಗಳ ನಂತರವೂ ಪರಭಾರೆ ಮಾಡಕೊಡದೆಂದು ಒಂದು ಕಾನೂನನ್ನು ಮಾಡುವುದಕ್ಕೆ ಸಾಧ್ಯವಿದೆಯೆ?

ಶ್ರೀ ಎ. ಲಕ್ಷ್ಮೀಸಾಗರ್.—ನಾನು ಕರ್ನಾಟಕ ರಾಜ್ಯದಲ್ಲಿ ಕಳೆದ ೧೦ ವರ್ಷಗಳಿಗಿಂತ ಕಡಿಮೆ ಇಲ್ಲದಂತೆ ವಾಸಮಾಡುತ್ತಿದ್ದೇನೆಂದು ಒಂದು ಸರ್ಟಿಫಿಕೇಟನ್ನು ಕೊಡಲೇಬೇಕಾಗುತ್ತದೆ. ಅದು ರೆಸಿಡೆನ್ಸ್ ಪ್ರೂಯಲ್ ಸರ್ಟಿಫಿಕೇಟ್.

ಇನ್ನು ಎರಡನೆಯ ಪ್ರಶ್ನೆಗೆ ಉತ್ತರ ಹೇಳುವುದಾದರೆ, ೧೦ ವರ್ಷಗಳ ನಂತರವೂ ಅದನ್ನು ಬೇರೆಯವರಿಗೆ ಪರಭಾರೆ ಮಾಡದಂತೆ ಕಾನೂನು ತಿದ್ದುಪಡಿ ಮಾಡಬೇಕೆಂದು ಹೇಳಿದ್ದಾರೆ. ಮಾನ್ಯ ಅಧ್ಯಕ್ಷರೆ, ನಾನೂ ವಕೀಲ, ತಾವೂ ವಕೀಲರು. ಟ್ರಾನ್ಸ್‌ಫರ್ ಆಫ್ ಪ್ರಾಪರ್ಟಿ ಆಕ್ಟ್ ಸೆಕ್ಷನ್ ೧೪ರ ಪ್ರಕಾರ ಆ ರೀತಿ ಮಾಡುವುದಕ್ಕೆ ಬರುವುದಿಲ್ಲ.

ಶ್ರೀ ಚಂದ್ರಕಾಂತ ಜಿ ಬೆಲ್ಲದ್.—ನಾನು ಏತಕ್ಕೆ ಇದನ್ನು ಹೇಳಂತ್ತಿದ್ದೇನೆಂದರೆ ನಮ್ಮ ಕರ್ನಾಟಕದ ಜನರಿಗೆ ಈ ನಿವೇಶನಗಳೇ ಸಿಕ್ಕುತ್ತಿಲ್ಲ. ಬೇರೆ ರಾಜ್ಯಗಳಿಂದ ಬಂದಿರತಕ್ಕ ಜನರಿಗೆ ನಿವೇಶನಗಳು ಸಿಕ್ಕುತ್ತಿವೆಯೆಂದು ತಿಳಿದು ಬಂದಿದೆ. ಇದರ ಬಗ್ಗೆ ಇರತಕ್ಕ ನ್ಯೂನತೆಯನ್ನು ತಾವು ಸರಿಪಡಿಸುತ್ತೀರಾ?

ಶ್ರೀ ಎ. ಲಕ್ಷ್ಮೀಸಾಗರ್.—ತಾವು ಖಚಿತವಾದ, ನಿರ್ದಿಷ್ಟವಾದ ಪ್ರಕರಣವನ್ನು ತೋರಿಸಿ ಇಂಥ ವ್ಯಕ್ತಿ ಕರ್ನಾಟಕದಲ್ಲಿ ೧೦ ವರ್ಷಗಳಿಗಿಂತಲೂ ಕಡಿಮೆ ವಾಸವಾಗಿದ್ದು ಈಗ ನಿವೇಶನವನ್ನು ಪಡೆದುಕೊಂಡಿದ್ದಾನೆಂದು ತಾವು ಹೇಳಿದರೆ, ಆಗ ಅದರ ಬಗ್ಗೆ ಕ್ರಮ ತೆಗೆದುಕೊಳ್ಳುತ್ತೇನೆ.

(ಶ್ರೀ ಕೌಜಲಗಿ.—ಇತರ ಸದಸ್ಯರು ಹಾಜರಿರಲಿಲ್ಲ.)

ಅಧ್ಯಕ್ಷರು.— ಮುಂದೂಡಿದ ಪ್ರಶ್ನೆಗಳು ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ನೀಡಲಾದ ಲಿಖಿತ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.— ಮಾನ್ಯ ಅಧ್ಯಕ್ಷರೇ ಲಿಖಿತಮೂಲಕ ಉತ್ತರಿಸುವ ಪ್ರಶ್ನೆಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.— ಲಿಖಿತ ಮೂಲಕ ಉತ್ತರಿಸಲಾದ ಪ್ರಶ್ನೆಗಳನ್ನು ಸಭೆಯ ಮುಂದಿಡಲಾಯಿತು.

ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಲಖಾಪುರ ಗ್ರಾಮದಲ್ಲಿರುವ ಕೊಳವೆ ಬಾವಿ ದುರಸ್ತಿ ಬಗ್ಗೆ

೫೧೧. **ಶ್ರೀ ಗೋಪಾಲ ಮಂಕಂದ ಕಾನಡೆ.**—ಮಾನ್ಯ ಗ್ರಾಮೀಣ ಅಭಿವೃದ್ಧಿ ವಸತಿ ಮಂತ್ರಿ ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಬಾದಾಮಿ ತಾಲ್ಲೂಕಿನ ಲಖಾಪುರ ಗ್ರಾಮದಲ್ಲಿ ಕೊಳವೆ ಬಾವಿ ನಿರ್ಮಿಸಿ ಅಲ್ಲಿಂದ ಪಂಪು ಮೂಲಕ ನೀರನ್ನು ತೊಟ್ಟಿಗೆ ಸಂಗ್ರಹಿಸಿ ಗ್ರಾಮಕ್ಕೆ ನೀರನ್ನು ಒದಗಿಸಂತ್ತಿದ್ದುದಿಂ ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಆ) ಕಳೆದ ಎರಡು ವರ್ಷಗಳಿಂದ ಸದರೀ ಕೊಳವೆ ಬಾವಿ ಮಂತ್ತು ಪಂಪುಸೆಟ್ಟು ಕೆಟ್ಟು ಹೋಗಿ ಗ್ರಾಮದ ಜನತೆಯು ಕುಡಿಯುವ ನೀರಿನ ಬಗ್ಗೆ ತೊಂದರೆ ಅನುಭವಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಇ) ಹಾಗಿದ್ದಲ್ಲಿ ಸದರೀ ಕೆಲಸವನ್ನು ದುರಸ್ತಿ ಮಾಡಿಸಿ ನೀರನ್ನು ಒದಗಿಸುವಂತೆ ಗ್ರಾಮಸ್ಥರು ಸರ್ಕಾರದವರಿಗೆ ವಿನಂತಿ ಮಾಡಿಕೊಂಡಿರುವುದಂ ನಿಜವೆ ?

ಈ) ಹಾಗಿದ್ದಲ್ಲಿ ಇದುವರೆವಿಗೂ ಸರ್ಕಾರದವರಂ ಯಾವುದೇ ರೀತಿ ಕ್ರಮ ಕೈಗೊಳ್ಳದೇ ಇರಲು ಕಾರಣಗಳೇನು ?

ಉ) ಸದರಿ ಗ್ರಾಮಂಕ್ಕೆ ತುರ್ತಾಗಿ ನೀರನ್ನು ಒದಗಿಸಲು ಕ್ರಮ ಕೈಗೊಳ್ಳಲಾಗುವುದೇ ?

ಶ್ರೀ ಅಬ್ದುಲ್ ನಜೀರ್ ಸಾಬ್ (ಗ್ರಾಮೀಣ ಅಭಿವೃದ್ಧಿ, ವಸತಿ ಮತ್ತು ವಕ್ಫ್ ಮಂತ್ರಿಗಳು).—

ಅ) ಬಂದಿದೆ.

ಆ) ಬಂದಿದೆ.

ಇ) ೨೯-೧-೮೬ರಲ್ಲಿ ಸಹಾಯಕ ಕಾರ್ಯಪಾಲಕ ಅಭಿಯಂತರರು ಜನಾರೋಗ್ಯ ಶಿಲ್ಪ ಕಾರ್ಯ ಉಪ ವಿಭಾಗ, ಬಾಗಲಕೋಟೆ ಇವರಿಗೆ ನೀರು ಸರಬರಾಜು ಯೋಜನೆ ಕುಂಠಿತಗೊಂಡಿರುವ ಬಗ್ಗೆ ಒಂದು ಮನವಿ ಬಂದಿರುತ್ತದೆ.